ಫೆಬ್ರವರಿ 2024

ಚಿಣ್ಣರ ಚೇತನ



ದಿ. ಶ್ರೀ ಅನಂತಕುಮಾರ
ಸಂಸ್ಥಾಪಕರು, ಅದಮ್ಯಚೇತನ,
ಮಾಜಿ ಕೇಂದ್ರ ಸಚಿವರು ಮತ್ತು ಲೋಕಸಭಾ ಸದಸ್ಯರು

ಓ ನನ್ನ ಚೇತನ ಆಗು ನೀ ಅನಿಕೇತನ

ಸೂರ್ಯನ ಶಕ್ತಿಯ ಸೈಕಲ್ ರಸ್ತೆ

ಸೈಕಲ್ ಸವಾರರಿಗೆಂದೇ ಹೈದರಾಬಾದ್ ನಗರದಲ್ಲಿ 23 ಕಿಲೊಮೀಟರ್ ಉದ್ದದ ಒಂದು ವಿಶೇಷ ರಸ್ತೆಯನ್ನು ನಿರ್ಮಿಸಲಾಗಿದೆ. ಇದರ ಛಾವಣಿಗೆ ಸೌರಫಲಕವನ್ನು ಉದ್ದಕ್ಕೂ ಹಾಸಲಾಗಿದ್ದು, ಬಿಸಿಲಿನಿಂದ ಇದು ವಿದ್ಯುತ್ ಶಕ್ತಿಯನ್ನು ಉತ್ಪಾದಿಸುತ್ತದೆ. ನಗರದ 800 ಕಿ.ಮೀ. ಉದ್ದದ ರಸ್ತೆಗುಂಟ 32 ಸಾವಿರ ಬೀದಿದೀಪಗಳನ್ನು ಉರಿಸಲು ಬೇಕಾದಷ್ಟು (16 ಮೆಗಾವಾಟ್) ವಿದ್ಯುತ್ ಶಕ್ತಿ ಇಲ್ಲಿ ಉತ್ಪನ್ನವಾಗುತ್ತದೆ. ಈ ವಿದ್ಯುತ್ತಿನಿಂದ ಸೈಕಲ್ ಸವಾರರಿಗೆ ನೇರ ಪ್ರಯೋಜನ ಇಲ್ಲವಾದರೂ ರಸ್ತೆಯಲ್ಲಿ ದಿನವಿಡೀ ನೆರಳು ಇರುತ್ತದೆ. ಮಳೆ, ಚಳಿ, ಬಿಸಿಲು ಎಲ್ಲ ಕಾಲದಲ್ಲೂ ಈ ಸಪಾಟು ರಸ್ತೆ ತನ್ನ ಗುಣಮಟ್ಟವನ್ನು ಕಾದುಕೊಂಡಿರುತ್ತದೆ. ಅಲ್ಲಲ್ಲಿ ಸೈಕಲ್ಲನ್ನು ಬಾಡಿಗೆಗೆ ಪಡೆಯುವ ವ್ಯವಸ್ಥೆಯೂ ಇದೆ.

ಬ್ರಿಟನ್ ಮತ್ತು ದಕ್ಷಿಣ ಕೊರಿಯಾ ದೇಶಗಳಲ್ಲಿ ಇಂಥದ್ದೇ ಸೈಕಲ್‌ಪಥಗಳನ್ನು ನಿರ್ಮಿಸಲಾಗಿದ್ದು, ಭಾರತದ ಮಟ್ಟಿಗೆ ಇದು ಮೊದಲನೆಯದು. ನಮ್ಮ ದೇಶದ ಎಲ್ಲ ಮನೆಗಳ ಛಾವಣಿಯ ಮೇಲೆ ಹೀಗೇ ಸೌರಫಲಕಗಳನ್ನು ಹೊದೆಸಿದರೆ ಎಷ್ಟೊಂದು ತಾಣಗಳಲ್ಲಿ ಪರಿಸರಸ್ನೇಹಿ ವಿದ್ಯುತ್ ಶಕ್ತಿಯನ್ನು ಹೊಮ್ಮಿಸಬಹುದು. ಕೆರೆ, ಕಾಲುವೆಗಳ ಮೇಲೂ ಹೀಗೆ ಸೌರಫಲಕಗಳನ್ನು ಹೊದೆಸಿದರೆ ವಿದ್ಯುತ್ ಶಕ್ತಿಯನ್ನು ಹೊಮ್ಮಿಸಬಹುದು. ನೀರು ಬೇಸಿಗೆಯಲ್ಲಿ ಆವಿಯಾಗದಂತೆ ತಡೆಯಲೂಬಹುದು. ಇಷ್ಟು ವರ್ಷ ಕಲ್ಲಿದ್ದಲು, ಡೀಸೆಲ್, ಭೂಗತ ಅನಿಲ ಮುಂತಾದ ಪಳೆಯುಳಿಕೆ ಇಂಧನಗಳನ್ನು ಉರಿಸಿದ್ದರಿಂದಾಗಿಯೇ ಭೂಮಿಯ ತಾಪಮಾನ ಏರುತ್ತಿದೆ. ಇನ್ನೂ ಜಾಸ್ತಿ ಏರದಂತೆ ತಡೆಗಟ್ಟಬೇಕೆಂದರೆ ಆದಷ್ಟೂ ಹೆಚ್ಚು ಬಿಸಿಲನ್ನು ಶಕ್ತಿಮೂಲವಾಗಿ ಬಳಸಬೇಕು.

ನಿಮಗಿದು ಗೊತ್ತೆ? ಸಾವಿರಾರು ಮಕ್ಕಳಿಗೆ ದಿನವೂ ಬಿಸಿಯೂಟ ಒದಗಿಸುವ 'ಅದಮ್ಯ ಚೇತನ' ಸಂಸ್ಥೆಯ ಅಡುಗೆ ಮನೆಗೆ ಬೇಕಾದ ವಿದ್ಯುತ್ ಶಕ್ತಿಯನ್ನು ಬಿಸಿಲೇ ಒದಗಿಸುತ್ತಿದೆ. ಬೆಂಗಳೂರಿನಲ್ಲಿ ಸೌರವಿದ್ಯುತ್ ತಂತ್ರಜ್ಞಾನ ಬಳಕೆಗೆ ಬಂದ ಹೊಸದರಲ್ಲೇ ಇಲ್ಲಿನ 'ಹಸಿರು ಅಡುಗೆ ಮನೆ' (ಗ್ರೀನ್ ಕಿಚನ್)ಗೆ ಸೂರ್ಯನ ಬೆಳಕು ವಿದ್ಯುತ್ ಶಕ್ತಿಯಾಗಿ, ರಾತ್ರಿಯಲ್ಲೂ ಬೆಳಕಾಗಿ ಬಂತು!

ಚಿತ್ರಕೃಪೆ: ತೆಲಂಗಾಣಾ ಟುಡೇ

ಹಾವಿನ ರೂಪದ ರೋಬಾಟ್‌ಗಳು

ರೋಬಾಟ್ ಎಂದಾಕ್ಷಣ ನಮಗೆ ಮನುಷ್ಯ ರೂಪದ ಯಂತ್ರಗಳೇ ಹೊಳೆಯುತ್ತವೆ. ಹಾವಿನ ರೂಪದ ರೋಬಾಟ್‌ಗಳಿದ್ದರೆ ಅವು ಏನೇನು ವಿಶೇಷ ಕೆಲಸಗಳನ್ನು ಮಾಡಬಹುದು, ಯೋಚಿಸಿ. ಇಕ್ಕಟ್ಟಿನ ಸಂದುಗೊಂದುಗಳಲ್ಲಿ ಅಥವಾ ಪೈಪ್ ಒಳಗೂ ಚಲಿಸಬಹುದು. ಭೂಕುಸಿತ ಅಥವಾ ಚಂಡಮಾರುತದಲ್ಲಿ ಮನೆಗಳು ಕುಸಿದರೆ ಅದರ ಒಳಕ್ಕೆ ಓಡಾಡಿ ಮಕ್ಕಳ ಅಥವಾ ಚಿನ್ನಾಭರಣಗಳ ಪತ್ತೆ ಮಾಡಬಹುದು. ಸುರಂಗದಲ್ಲಿ ಸಿಲುಕಿದ ಗಣಿಕಾರ್ಮಿಕರ ವಿಡಿಯೊ ಚಿತ್ರಣ ಪಡೆಯಬಹುದು. ಅಮೆರಿಕದ ಬಾಹ್ಯಾಕಾಶ ಸಂಸ್ಥೆಗೆಂದು (ನಾಸಾ) ತಾಂತ್ರಿಕ ತಜ್ಞರು ಹಾವಿನ ರೂಪದ ಶೋಧನೌಕೆಗಳನ್ನು ರೂಪಿಸುತ್ತಿದ್ದಾರೆ. ಭೂಮಿಯ ಆಚಿನ ಗ್ರಹ, ಉಪಗ್ರಹಗಳಲ್ಲಿ ಮರಳು, ಬಂಡೆಗಲ್ಲು ಅಥವಾ ಹಿಮಹಾಸು ಇದ್ದರೂ ಅವು ಸರಸರ ಚಲಿಸಿ ಅಲ್ಲಿನ ನೆಲದ ಗುಣಲಕ್ಷಣಗಳನ್ನು ವರದಿ ಮಾಡಬಹುದು. ಊಹಿಸಿ: ನಿಮ್ಮ ಬಳಿ ಇಂಥದ್ದೊಂದು ಹಾವು ಇದ್ದರೆ ಮನೆಯ ಕತ್ತಲಕೋಣೆಯಲ್ಲಿ ಅಸಲೀ ಹಾವು ಇದ್ದರೂ ಇದು ಪತ್ತೆ ಮಾಡಬಹುದು!

ವೈಜ್ಞಾನಿಕ ಸತ್ಯ ಹೇಳಿದ್ದಕ್ಕೆ ಬಹುಕ್ರೂರ ಶಿಕ್ಷೆ

ವೈಜ್ಞಾನಿಕ ಸತ್ಯವನ್ನು ಹೇಳಿ ಅತ್ಯಂತ ಕ್ರೂರ ಶಿಕ್ಷೆಗೆ ಗುರಿಯಾದ ವಿಜ್ಞಾನಿ ಯಾರು ಗೊತ್ತೆ? ಇಟಲಿಯ ಜಿಯಾರ್ಡೋನೊ ಬ್ರೂನೊ. ನಕ್ಷತ್ರಗಳೆಂದರೆ ತುಂಬ ದೂರದಲ್ಲಿರುವ ಸೂರ್ಯಗಳೆಂದೂ ಅವುಗಳ ಸುತ್ತ ಗ್ರಹಗಳು ಸುತ್ತುತ್ತವೆಂದೂ ಮೊದಲು ಹೇಳಿದವನು ಅವನೇ. (ಸೂರ್ಯನ ಸುತ್ತ ಗ್ರಹಗಳು ಸುತ್ತುತ್ತವೆಂದು ಮೊದಲು ಹೇಳಿದವನು ಕೊಪರ್ನಿಕಸ್). ಅಂಥ ಗ್ರಹಗಳಲ್ಲಿ ಜೀವಿಗಳೂ ಇರಬಹುದೆಂದು ಕೂಡ ಬ್ರೂನೊ ಹೇಳಿದ. ಅದು ಕ್ರೈಸ್ತರ ಧಾರ್ಮಿಕ ನಂಬಿಕೆಗೆ ವಿರುದ್ಧವಾದುದರಿಂದ ಅವನ 'ಅಪರಾಧ'ಕ್ಕೆ ಏಳು ವರ್ಷಗಳ ಕಾಲ ವಿಚಾರಣೆ ನಡೆದು ಆಮೇಲೆ ಕ್ರಿ.ಶ. 1600ರ ಫೆಬ್ರುವರಿ 17ರಂದು ರೋಮ್ ನಗರದ ಸಂತೆಯ ಮಧ್ಯೆ, ಕಟ್ಟಿಗೆ ರಾಶಿಯ ಮಧ್ಯೆ ಬೆತ್ತಲೆ ನಿಲ್ಲಿಸಿ ಜೀವಂತ ಸುಡಲಾಯಿತು.

ಅವನು ಸತ್ಯವನ್ನೇ ಹೇಳಿದ್ದನೆಂದು ಈಗ ನಮಗೆ ಗೊತ್ತಾಗಿದೆ. ಈಗಿನ ಖಗೋಲವಿಜ್ಞಾನಿಗಳು ಸೌರಮಂಡಲದ ಆಚೆಗಿನ ನಕ್ಷತ್ರಗಳ ಸುತ್ತ ಇದುವರೆಗೆ 5576 ಗ್ರಹಗಳನ್ನು ಗುರುತಿಸಿದ್ದಾರೆ.

ಈ ತಿಂಗಳಿನ ಇನ್ನೊಂದು ವಿಜ್ಞಾನ ವಿಷಯ ಏನು ಗೊತ್ತೆ? ಒಂದು ನೊಬೆಲ್ ಪ್ರಶಸ್ತಿಯನ್ನು ಸಾಮಾನ್ಯವಾಗಿ ಎರಡು, ಮೂರು ವಿಜ್ಞಾನಿಗಳಿಗೆ ಹಂಚಲಾಗುತ್ತದೆ. ಒಂದು ವಿಷಯದ ಮೇಲೆ ಒಬ್ಬರಿಗೆ ಮಾತ್ರ ಆ ಪ್ರಶಸ್ತಿ ಸಿಗುವುದು ಅಪರೂಪ. ಹಾಗೆ ಬೇರೊಬ್ಬರೊಡನೆ ಹಂಚಿಕೊಳ್ಳದೇ ಒಬ್ಬನೇ ವಿಜ್ಞಾನಿ ಎರಡು ಬಾರಿ ನೊಬೆಲ್ ಪ್ರಶಸ್ತಿ ಪಡೆದಿದ್ದು ಗೊತ್ತೆ? ಅಮೆರಿಕದ ರಸಾಯನವಿಜ್ಞಾನಿ ಲಿನಸ್ ಪಾಲಿಂಗ್ (ಜನ್ಮದಿನ: 28 ಫೆಬ್ರುವರಿ 1901) ಅವರಿಗೆ ರಸಾಯನ ವಿಜ್ಞಾನದಲ್ಲಿ ನೊಬೆಲ್ ಬಂದು. ನೊಬೆಲ್ ಶಾಂತಿ ಪುರಸ್ಕಾರವೂ ಸಂದಿದೆ.

ಸುಭಾಷಿತ

क्षणशः कणशश्चैव विद्यां अर्थं च साधयेत् ।
क्षणे नष्टे कुतो विद्या कणे नष्टे कुतो धनम् ।।

ಕ್ಷಣಶಃ ಕಣಶಶ್ಚೈವ ವಿದ್ಯಾಮ್ ಅರ್ಥಂಚ ಸಾಧಯೇತ್।
ಕ್ಷಣೇ ನಷ್ಟೇ ಕುತೋ ವಿದ್ಯಾ ಕಣೇ ನಷ್ಟೇ ಕುತೋ ಧನಮ್॥

ನಿರಂತರ ಪ್ರಯತ್ನದಿಂದ, ಕ್ಷಣಕ್ಷಣವನ್ನೂ ಹಾಳು ಮಾಡದೆ ಜ್ಞಾನವನ್ನು ಪಡೆಯಬೇಕು. ಪ್ರತಿಯೊಂದು ಸಂಪನ್ಮೂಲವನ್ನು ಬಳಸಿಕೊಂಡು ಸಂಪತ್ತನ್ನು ಗಳಿಸಬೇಕು. ಸಮಯವನ್ನು ವ್ಯರ್ಥ ಮಾಡಿದರೆ, ನೀವು ಜ್ಞಾನವನ್ನು ಪಡೆದೀರಿ ಹೇಗೆ? ಪೈಸೆ ಪೈಸೆಯನ್ನೂ ಒಟ್ಟುಗೂಡಿಸದಿದ್ದರೆ ನೀವು ಸಂಪತ್ತನ್ನು ಗಳಿಸೀರಿ ಹೇಗೆ?

ಸೋಜಿಗದ ಸಸ್ಯ ಈ ಲೋಳೆಸರ

ಎಂಥ ಒಣನೆಲದಲ್ಲೂ ಬೆಳೆಯಬಲ್ಲ 'ಲೋಳೆಸರ'ದ ಬಗ್ಗೆ ನಿಮಗೆಷ್ಟು ಗೊತ್ತು? ಕಳ್ಳಿ, ಕತ್ತಾಳೆಯ ಜಾತಿಗೆ ಸೇರಿದ ಈ ಸಸ್ಯ ಅತ್ಯಲ್ಪ ನೀರಿನಲ್ಲೂ ಬದುಕಬಲ್ಲದು. ಇದರ 'ಎಲೆ'ಯನ್ನು ಕತ್ತರಿಸಿದರೆ ಒಳಗೆ ತಂಪಾದ ಲೋಳೆಯಂಥ ಅಂಟುದ್ರವ ಜಿನುಗುತ್ತದೆ. ಈ ಅಂಟನ್ನು ಮುಖಕ್ಕೆ ಅಥವಾ ದೇಹದ ಯಾವುದೇ ಭಾಗಕ್ಕೆ ಹಚ್ಚಿಕೊಂಡರೂ ತ್ವಚೆ ನುಣುಪಾಗುತ್ತದೆ. ತಲೆಗೆ ಹಚ್ಚಿಕೊಂಡರೆ ಕೂದಲನ್ನು ಒಪ್ಪವಾಗಿ ಬಾಚಬಹುದು. ಚರ್ಮದ ಮೇಲಿನ ಹುಣ್ಣು, ಬೊಕ್ಕೆ ಮತ್ತು ಗಾಯಗಳಿಗೆ ಇದನ್ನು ಲೇಪಿಸಬಹುದು. ಈ ರಸದಿಂದ ವಿಧವಿಧದ ಶಾಂಪೂ, ಕ್ರೀಮ್, ಹೇರ್ ಕಂಡಿಶನರ್ ಮುಂತಾದ ಸೌಂದರ್ಯವರ್ಧಕಗಳನ್ನು ತಯಾರಿಸುತ್ತಾರೆ. ಲೋಳೆಸರದ ತಿರುಳನ್ನು ಸಣ್ಣ ತುಂಡುಗಳನ್ನಾಗಿ ಮಾಡಿ ಸೇವಿಸಿದರೆ ಜೀರ್ಣಕಾರಿ ಎಂತಲೂ ಹೇಳಲಾಗಿದೆ. ಭಾರತೀಯ ಔಷಧ ಪರಂಪರೆಯಲ್ಲಿ ಈ ಸಸ್ಯಕ್ಕೆ ಉನ್ನತ ಸ್ಥಾನವಿದೆ. ಇಷ್ಟೆಲ್ಲ ಮಹತ್ವದ ಈ ಕಳ್ಳಿಯ ಎಲೆಗಳಿಂದ ಈಗ ಬೆಳಕು ಹೊಮ್ಮಿಸಬಲ್ಲ 'ಕೆಪಾಸಿಟರ್' ಎಂಬ ವಿದ್ಯುತ್ ಸಾಧನವನ್ನೂ ಚೀನೀ ವಿಜ್ಞಾನಿಗಳು ರೂಪಿಸಿದ್ದಾರೆ. ನಿಮ್ಮ ಮನೆಯಲ್ಲಿ/ಶಾಲೆಯಲ್ಲಿ ಲೋಳೆಸರ ಇದೆಯೆ?

ವಿಶ್ವ ಜಲಭೂಮಿ ದಿನ: ಫೆಬ್ರುವರಿ 2

ಫೆಬ್ರುವರಿ 2ರಂದು ಜಗತ್ತಿನ ಅನೇಕ ದೇಶಗಳ ಶಾಲಾ ಮಕ್ಕಳು ಪಿಕ್ನಿಕ್ ಹೋಗುತ್ತಾರೆ. ಕೈಯಲ್ಲಿ ಟಿಪ್ಪಣಿ ಪುಸ್ತಕ, ಕ್ಯಾಮರಾ ಅಥವಾ ದುರ್ಬೀನ್ ಹಿಡಿದಿರುತ್ತಾರೆ. ತಮ್ಮ ಸಮೀಪದ ಕೆರೆ, ಜಲಾಶಯ, ನದಿತೀರ ಅಥವಾ ಸಮುದ್ರದಂಚಿನ ಅಳಿವೆಗಳಿಗೆ ಹೋಗುತ್ತಾರೆ. ಈ ಜಲತಾಣಗಳು ಸ್ವಚ್ಛ ಇವೆಯೆ, ಸುಸ್ಥಿತಿಯಲ್ಲಿವೆಯೆ ನೋಡುತ್ತಾರೆ. ಈ ತಾಣಗಳಲ್ಲಿ ಪಕ್ಷಿ, ಜಲಪಕ್ಷಿ, ಕಪ್ಪೆ, ಮೀನು, ಏಡಿ, ನೀರೊಳ್ಳೆ ಹಾವು, ನೀರಾಮೆ ಇವೆಲ್ಲ ಸುರಕ್ಷಿತ ಇವೆಯೆ ಎಂದು ಅವಲೋಕನ ಮಾಡುತ್ತಾರೆ. ಇಂದು 'ವಿಶ್ವ ಜಲಭೂಮಿ ದಿನ'. ವರ್ಷವಿಡೀ ಇಲ್ಲಿ ನೀರಿರಬೇಕು. ನೀರನ್ನು ಆಶ್ರಯಿಸಿದ ಸಮೃದ್ಧ ಜೀವಲೋಕ ಇರಬೇಕು. ಆಗ ಮಾತ್ರ ನಮ್ಮ ಭವಿಷ್ಯವೂ ಸುರಕ್ಷಿತ, ಸಮೃದ್ಧ ಎಂಬ ಭಾವನೆ ಮಕ್ಕಳಲ್ಲಿ ಬೆಳೆಯಬೇಕು ಎಂಬ ಉದ್ದೇಶದಿಂದ ಇಂಥ 'ನೀರಿನೆಡೆ ನಡಿಗೆ'ಏರ್ಪಡಿಸುತ್ತಾರೆ. ತಮ್ಮ ಪ್ರವಾಸದ ಬಗ್ಗೆ ಮಕ್ಕಳು ಮರುದಿನ ಚಿತ್ರ–ಪ್ರಬಂಧ ಬರೆಯುವ, ರಂಗೋಲಿ ಹಾಕುವ, ಹಾಡುಕಟ್ಟುವ, ಭಾಷಣ ಮಾಡುವ ಸ್ಪರ್ಧೆಗಳನ್ನು ಶಾಲೆಗಳಲ್ಲಿ ಏರ್ಪಡಿಸಲಾಗುತ್ತದೆ. ವಿಜೇತರಿಗೆ ಪಾರಿತೋಷಕ ಇರುತ್ತದೆ. ಏಕೆಂದರೆ ವರ್ಷವಿಡೀ ಈ ದಿನದ ನೆನಪನ್ನು ತಾಜಾ ಇಟ್ಟಿರಬೇಕಲ್ಲವೆ?

ನಿಮಗಿದು ಗೊತ್ತೆ? ಅತ್ಯಂತ ಸಮೃದ್ಧ ಜಲತಾಣಕ್ಕೆ 'ರಾಮ್‌ಸಾರ್ ಸೈಟ್' ಎಂಬ ಅಂತರರಾಷ್ಟ್ರೀಯ ಬಿರುದನ್ನು ನೀಡಲಾಗುತ್ತದೆ. ನಮ್ಮ ದೇಶದಲ್ಲಿ ಅಂಥ ಬಿರುದು ಪಡೆದ 75 ಜಲಾಶಯಗಳಿವೆ. ನಮ್ಮ ರಾಜ್ಯದಲ್ಲಿ ಎಷ್ಟೆಲ್ಲ ಉತ್ತಮ ಕೆರೆಗಳಿದ್ದರೂ ರಂಗನತಿಟ್ಟು ಪಕ್ಷಿಧಾಮಕ್ಕೆ ಅಂಥ ಮಾನ್ಯತೆ ಸಿಕ್ಕಿದೆ.

ಕಾಫಿಯ ಬೆಲೆ ಏರಿಸಬಲ್ಲ ಪುನುಗು ಬೆಕ್ಕು

ಭಾರತದ ದಟ್ಟ ಕಾಡುಗಳಲ್ಲಿ ಬೂದು–ಕಪ್ಪು ಬಣ್ಣದ ಪುನುಗನ ಬೆಕ್ಕು (ಸಿವೆಟ್ ಕ್ಯಾಟ್)ಗಳು ವಾಸಿಸುತ್ತವೆ. ಹಣ್ಣು, ಕಾಯಿ, ಓತಿಕ್ಯಾತ, ಹಾವಿನ ಮರಿ ಸಹಸ್ರಪದಿ ಮುಂತಾದವನ್ನು ತಿನ್ನುವ ಈ ಪ್ರಾಣಿಯ ವಿಶೇಷ ಏನೆಂದರೆ ಇವುಗಳ ಬಾಲದ ಬುಡದಲ್ಲಿ ಪರಿಮಳ ಸೂಸುವ ಗ್ರಂಥಿಗಳಿವೆ. ಕಾಫಿತೋಟದಲ್ಲಿ ಇವು ಕಾಫಿ ಹಣ್ಣನ್ನು ತಿಂದು ಮಲವಿಸರ್ಜನೆ ಮಾಡಿದಾಗ, ಅದರೊಂದಿಗೆ ಬರುವ ಬೀಜಕ್ಕೂ ತುಸು ವಿಶೇಷ ಪರಿಮಳ ಬರುತ್ತದೆ. ಅಂಥ ಕಾಫಿಬೀಜಗಳಿಗೆ ಭಾರೀ ಬೆಲೆ ಇದೆ. ಅಂಥ ಬೀಜಗಳನ್ನು ಒಣಗಿಸಿ, ಹುರಿದು, ಪುಡಿಯನ್ನು ಕುದಿಸಿ ತಯಾರಿಸುವ ಕಷಾಯಕ್ಕೆ 'ಕಾಪಿ ಲುವಾಕ್' ಎಂತಲೇ ಹೆಸರಿದ್ದು, ಪ್ರತಿಷ್ಠಿತ ಹೊಟೆಲ್‌ಗಳಲ್ಲಿ ಒಂದು ಕಪ್‌ಗೆ ಸಾವಿರಾರು ರೂಪಾಯಿ ಬೆಲೆ ಇದೆ. ಇಂಡೊನೇಷ್ಯದ ಕಾಫಿ ತೋಟಗಳಲ್ಲಿ ಬೇಕಂತಲೇ ಈ ಪ್ರಾಣಿಗಳನ್ನು ಪಂಜರದಲ್ಲಿಟ್ಟು ಸಾಕಿಕೊಳ್ಳುವವರಿದ್ದಾರೆ. ಕಾಡಿನಲ್ಲಿ ಓಡಾಡಿ ಮುಕ್ತವಾಗಿ ಬೀಜ ಪ್ರಸಾರ ಮಾಡುತ್ತ ಅರಣ್ಯವನ್ನು ಸಮೃದ್ಧಗೊಳಿಸಬೇಕಾದ ಈ ಬೆಕ್ಕುಗಳನ್ನು ಮಾಂಸಕ್ಕಾಗಿಯೂ ಬೇಟೆ ಆಡುವವರಿದ್ದಾರೆ.

ಕಲ್ಲುಪ್ಪು, ಬಿಳಿಯುಪ್ಪು, ಪೆಟ್ಲುಪ್ಪು, ಜಜಿಯನ್ ಉಪ್ಪು

ಉಪ್ಪುಗಳಲ್ಲಿ ಎಷ್ಟು ವಿಧ? ನಮಗೆ ಅಡುಗೆ ಉಪ್ಪು, ಬಿಳಿಯುಪ್ಪು, ಗಣಿಗಳಿಂದ ತೆಗೆದ ಕಲ್ಲುಪ್ಪು, ಪೆಟ್ಲುಪ್ಪು ಹೀಗೆ ಕೆಲವಷ್ಟೇ ಗೊತ್ತಿವೆ. ಹೆಚ್ಚಾಗಿ ಅಡುಗೆಗೆ ಅಯೊಡಿನ್ ಮಿಶ್ರಿತ ಬಿಳಿ ಉಪ್ಪನ್ನು ಬಳಸುತ್ತೇವೆ. ಉಪ್ಪು ಇದ್ದಲ್ಲಿ ಸೂಕ್ಷ್ಮಾಣುಗಳು ಬದುಕಲಾರವು. ಆದ್ದರಿಂದಲೇ ನಾವು ಮಾವಿನ ಮಿಡಿ, ನೆಲ್ಲಿಕಾಯಿ, ನಿಂಬೆಹೋಳು ಮುಂತಾದವುಗಳನ್ನು ದೀರ್ಘಕಾಲ ಸಂರಕ್ಷಿಸಲೆಂದು ಉಪ್ಪಿನ ಜಾಡಿಗಳಲ್ಲಿ ಹಾಕಿಡುತ್ತೇವೆ. ಹಿಂದೊಂದು ಕಾಲದಲ್ಲಿ ಉಪ್ಪು ಅದೆಷ್ಟು ಅಪರೂಪ ಆಗಿತ್ತೆಂದರೆ, ಉಪ್ಪಿನ ಪೊಟ್ಟಣಗಳನ್ನೇ ಹಣದ ರೂಪದಲ್ಲಿ ಚಲಾವಣೆಗೆ ಬಳಸುತ್ತಿದ್ದರು. ಈಗಲೂ ಆಫ್ರಿಕಾ ಖಂಡದ ಅನೇಕ ಮೂಲನಿವಾಸಿಗಳು ತಮ್ಮ ಆಹಾರದಲ್ಲಿ ಉಪ್ಪನ್ನು ಬಳಸುವುದೇ ಇಲ್ಲ. ಕನ್ನಡದಲ್ಲಿ ಮಂಗರಸ ಎಂಬ ಮಾಂಡಲಿಕ ರಾಜನೊಬ್ಬ 1508ರಲ್ಲಿ 'ಸೂಪಶಾಸ್ತ್ರ' ಹೆಸರಿನ ಗ್ರಂಥವನ್ನು ಬರೆದಿದ್ದು ಅದರಲ್ಲಿ

ನೂರಾರು ಬಗೆಯ ಅಡುಗೆ ವಿಧಾನವನ್ನು ಬಣ್ಣಿಸಿದ್ದಾನೆ. ಆದರೆ ಉಪ್ಪಿನ ಪ್ರಸ್ತಾಪವೇ ಇಲ್ಲ. ಈಗ ಎಲ್ಲರೂ ಉಪ್ಪನ್ನು ನಿತ್ಯದ ಅಡುಗೆಗೆ ಬಳಸುತ್ತಾರೆ. ಕೆಲವರು ಜಾಸ್ತಿ ಉಪ್ಪನ್ನು ಸೇವಿಸುತ್ತ ರಕ್ತದ ಅತಿ ಒತ್ತಡ (ಹೈ ಬಿಪಿ), ಹೃದ್ರೋಗದಂಥ ಕಾಯಿಲೆಗೆ ತುತ್ತಾಗುತ್ತಾರೆ. ಉಪ್ಪನ್ನು ಮಿತಿಯಲ್ಲಿ ಬಳಸಬೇಕು ಎಂದು ವೈದ್ಯರೂ ಹೇಳುತ್ತಾರೆ. ದಕ್ಷಿಣ ಕೊರಿಯಾದಲ್ಲಿ ಹಸಿ ಬೊಂಬಿನ ಕೊಳವೆಯಲ್ಲಿ ಉಪ್ಪನ್ನು ತುಂಬಿ, ಕೆಮ್ಮಣ್ಣಿನಿಂದ ಮುಚ್ಚಿ, ಬಿಸಿಮಾಡಿ, ತಂಪುಮಾಡಿ, ಅದನ್ನೇ ಆರೆಂಟು ಬಾರಿ ಬೇರೆಬೇರೆ ಕೊಳವೆಗಳಲ್ಲಿ ಬಿಸಿ–ತಂಪು ಮಾಡುತ್ತ ಕೊನೆಗೆ 'ಜಜಿಯನ್ ಉಪ್ಪು' ತಯಾರಿಸುತ್ತಾರೆ. ಅದಕ್ಕೆ ವಿಶಿಷ್ಟ ರುಚಿ ಮತ್ತು ರೋಗನಿವಾರಕ ಗುಣ ಇದೆಯೆಂದು ಕೊರಿಯನ್ ಜನರು ನಂಬುತ್ತಾರೆ. ಕಿಲೊಕ್ಕೆ ಸಾವಿರಾರು ರೂಪಾಯಿ ಮೌಲ್ಯಗಳಿರುವ ಆ ಲವಣ ಜಗತ್ತಿನ ಅತಿ ದುಬಾರಿ ಉಪ್ಪು ಎಂದೇ ಖ್ಯಾತವಾಗಿದೆ.

ಸಮುದ್ರದ ನೀರಿನಿಂದ ತಯಾರಾಗುವ ಉಪ್ಪನ್ನೇ ನಾವೆಲ್ಲರೂ ಬಳಸುತ್ತೇವೆ. ಸಮುದ್ರಕ್ಕೆ ಬಹುದೊಡ್ಡ ಪ್ರಮಾಣದಲ್ಲಿ ಪ್ಲಾಸ್ಟಿಕ್ ಸೇರ್ಪಡೆ ಆಗುತ್ತಿದೆ. ಅಲ್ಲಿ ಅವು ಚಿಂದಿಯಾಗಿ, ಕಣ್ಣಿಗೆ ಕಾಣದಷ್ಟು ಸೂಕ್ಷ್ಮ ಕಣಗಳಾಗಿ ಉಪ್ಪಿನಲ್ಲೂ ಸೇರ್ಪಡೆ ಆಗುತ್ತವೆ. ಮಾರುಕಟ್ಟೆಯಲ್ಲಿರುವ ಬಹಳಷ್ಟು ಬಗೆಯ ಸಮುದ್ರಲವಣದಲ್ಲಿ ಅಂಥ ಮೈಕ್ರೊಪ್ಲಾಸ್ಟಿಕ್ ಕಣಗಳು ಪತ್ತೆಯಾಗಿವೆ. ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಮರುಬಳಕೆಗೆ ಕಳಿಸಬೇಕೆ ವಿನಾ ಅವು ನೀರಿಗೆ, ಸಮುದ್ರಕ್ಕೆ ಸೇರಿ ಕೊನೆಗೆ ನಮ್ಮ ಹೊಟ್ಟೆಯಲ್ಲಿ ಶೇಖರವಾಗದಂತೆ ನಾವು ಎಚ್ಚರಿಕೆ ವಹಿಸಬೇಕು.

ರಸಪ್ರಶ್ನೆ:

ಭಾರತದ ಹೆಮ್ಮೆಯ ನೊಬೆಲ್ ವಿಜ್ಞಾನಿ ಸರ್ ಸಿ.ವಿ. ರಾಮನ್ ನೆನಪಿನಲ್ಲಿ ಪ್ರತಿವರ್ಷ ಫೆಬ್ರುವರಿ 28ರಂದು 'ರಾಷ್ಟ್ರೀಯ ವಿಜ್ಞಾನ ದಿನ' ಎಂದು ಆಚರಿಸುತ್ತೇವೆ. ಅವರ ಜನ್ಮದಿನ 7 ನವಂಬರ್ 1888; ಮತ್ತು ಅವರು ವಿಧಿವಶರಾಗಿದ್ದು 21 ನವಂಬರ್ 1970. ಆದರೂ ಪ್ರತಿವರ್ಷ ಫೆಬ್ರುವರಿ 28ರಂದು ಯಾಕೆ ಅವರನ್ನು ನೆನಪಿಸಿಕೊಳ್ಳುತ್ತೇವೆ?

ಕಳೆದ ತಿಂಗಳಿನ ರಸಪ್ರಶ್ನೆಗೆ ಉತ್ತರ: 'ಲೋಹದ ಚೊಂಬಿನಲ್ಲಿ ಅಥವಾ ಪ್ಲಾಸ್ಟಿಕ್ ಪಾತ್ರೆಯಲ್ಲಿ ಇಟ್ಟ ನೀರಿಗಿಂತ ಮಣ್ಣಿನ ಕೊಡದಲ್ಲಿ ಇಟ್ಟ ನೀರು ತಂಪಾಗಿರುತ್ತದೆ ಏಕೆ?' ಎಂದು ಕಳೆದ ಬಾರಿ ಕೇಳಲಾಗಿತ್ತು. ಅದರ ಉತ್ತರ ಹೀಗಿದೆ: ಮಣ್ಣಿನ ಮಡಕೆಯಲ್ಲಿ ಕಣ್ಣಿಗೆ ಕಾಣದ ಅಸಂಖ್ಯಾತ ಸೂಕ್ಷ್ಮ ರಂಧ್ರಗಳಿರುತ್ತವೆ. ಅವುಗಳ ಮೂಲಕ ನೀರು ಸುತ್ತೆಲ್ಲ ಒಸರುತ್ತ ಆವಿಯಾಗಿ ಹೋಗುತ್ತಿರುತ್ತದೆ. ಹಾಗೆ ಒಸರುವಾಗ ತನ್ನ ಪಾತ್ರೆಯಲ್ಲಿನ ಶಾಖವನ್ನು ಹೀರಿಕೊಳ್ಳುತ್ತಲೇ ಆವಿಯಾಗುತ್ತಿರುತ್ತದೆ. ಮಡಕೆಯ ನೀರು ಕ್ರಮೇಣ ತನ್ನ ಉಷ್ಣತೆಯನ್ನು ಕಳೆದುಕೊಳ್ಳುತ್ತ, ಅಂದರೆ ತಂಪಾಗುತ್ತ ಹೋಗುತ್ತದೆ.

ಅದಮ್ಯ ಚೇತನ

BBMP ಸಮುದಾಯ ಭವನ, ಗವಿಪುರ, ಬೆಂಗಳೂರು 560019

ಅದಮ್ಯ ಚೇತನ
Adamya Chetana

ಅದಮ್ಯಚೇತನದಿಂದ ಶಾಲಾ ಮಕ್ಕಳಿಗಾಗಿ
ಪ್ರಕಾಶಿತ 'ಚಿಣ್ಣರ ಚೇತನ' ಗೋಡೆಪತ್ರಿಕೆ

© ಎಲ್ಲ ಹಕ್ಕುಗಳು ಅದಮ್ಯಚೇತನಕ್ಕೆ ಸೇರಿವೆ

ಸಂಪಾದಕರು: ನಾಗೇಶ ಹೆಗಡೆ   ವಿನ್ಯಾಸ: ಶ್ರೀಪಾದ
ಮುದ್ರಣ: ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು
https://adamyachetana.org/

ಪ್ರಕಾಶಕರು: ತೇಜಸ್ವಿನಿ ಅನಂತಕುಮಾರ, ಅದಮ್ಯ ಚೇತನ

ಸಹಯೋಗ:
ಅನಂತಕುಮಾರ ಪ್ರತಿಷ್ಠಾನ
12, ಸುಮೇರು, ಎಮ್ ಎನ್ ಕೃಷ್ಣರಾವ್ ರಸ್ತೆ,
ಬಸವನಗುಡಿ,
ಬೆಂಗಳೂರು 560004
https://akp.org.in/